ಒ ಎಸ್ ನಂ. 290/2012
ಡಿ.ಡಬ್ಲ್ಯೂ಼ 5 ಹಾಜರು

ದಿನಾಂಕಃ 09-03-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಪಾಟೀ ಸವಾಲು ಶ್ರೀಯುತ ಎಸ್ ವಿ ಡಿ ವಕೀಲರಿಂದಃ

ನಾನು ದ್ವಿತಿಯ ಪಿ ಯು ಸಿ ವರೆಗೆ ಓದಿರುತ್ತೇನೆ. ನನ್ನ ಜನ್ಮ ದಿನಾಂಕಃ 01-04-1964. ಮೊದಲನೆ ಪ್ರತಿವಾದಿ, ವಾದಿ, ಮತ್ತು 2 ಹಾಗೂ 3 ನೇ ಪ್ರತಿವಾದಿಗಳು ನನಗೆ ಶಿಕ್ಷಣ ಕೊಡಿಸಿದ್ದರು ಎಂದರೆ ಸರಿಯಲ್ಲ. ನಾನು ಶಿಕ್ಷಣ ಪಡೆಯುವ ಸಮಯದಲ್ಲಿ ಕೂಡಿಯೇ ಇದ್ದೇವೆ ಎಂದರೆ ಸರಿಯಲ್ಲ. ಜನತಾ ಕೊಲ್ಡ್ರಿಂಕ್ಸ ಮೃತ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು. ಸದರಿ ವ್ಯವಹಾರವನ್ನು ಚಿತ್ರಾ ಜಾಕೀಸ ಎದುರುಗಡೆ ಇರುವ ಕಮತಗೌಡ ರವರ ಕಟ್ಟಡದಲ್ಲಿ ಪ್ರಾರಂಬಿಸಲಾಗಿತ್ತು ಎಂದರೆ ನನಗೆ ಅಷ್ಟೊಂದು ಮಾಹಿತಿ ಇಲ್ಲ. ಸದರಿ ವ್ಯವಹಾರವನ್ನು ಎಷ್ಟನೇ ವರ್ಷದಲ್ಲಿ ಬಂದ ಮಾಡಲಾಯಿತು ಎಂಬುದು ಸಹ ನನಗೆ ಗೊತ್ತಿಲ್ಲ. ದಾವಾ ಐಟಮ ನಂ.1 ನೀರಾವರಿ ಜಮೀನು ಅಥವಾ ಮರಡಿ ಜಮೀನು ಎಂಬುದು ನನಗೆ ಮಾಹಿತಿ ಇಲ್ಲ. ಸದರಿ ಜಮೀನು ಮೊದಲನೆ ಪ್ರತಿವಾದಿಯ ಹೆಸರಿನಲ್ಲಿತ್ತು. ಮೊದಲನೆ ಪ್ರತಿವಾದಿ ಯಾವುದೇ ನೌಕರಿ ಮಾಡುತ್ತಿರಲಿಲ್ಲ. ಆತನಿಗೆ ದಾನ ಮತ್ತು ಇನ್ನಿತರ ರೂಪದಲ್ಲಿ ಆಸ್ತಿಗಳು ಬಂದ ಬಗ್ಗೆ ನನಗೆ ಮಾಹಿತಿ ಇಲ್ಲ. ಮೊದಲನೆ ಪ್ರತಿವಾದಿ ಈಗ ನನ್ನ ಬಳಿ ಇರುತ್ತಾರೆ ಎಂದರೆ ಸರಿ. ನಾನು ಈಗ ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ಬಟ್ಟೆಗಳ ರೆಡಿಮೆಡ ಅಂಗಡಿಗಳನ್ನು ಪ್ರಾರಂಬಿಸಿದ್ದೇನೆ ಎಂದರೆ ಸರಿ. ಮೊದಲನೆ ಪ್ರತಿವಾದಿ ಸದರಿ ಅಂಗಡಿಯಲ್ಲಿಯೇ ಇರುತ್ತಾರೆ ಎಂದರೆ ಸರಿ.

ನಾವು ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿರುವ ಮನೆಯಲ್ಲಿ ಎಲ್ಲರೂ ಒಟ್ಟಿಗೆ ಇದ್ದೇವೆ ಎಂದರೆ ಸಾಕ್ಷಿ ಬೇರೆ ಬೇರೆ ಇದ್ದೇವೆಂದು ನುಡಿದಿರುತ್ತಾರೆ. 1982 ರಲ್ಲಿ ಪ್ರಶಾಂತ ಲಾಡ್ಜ ಪ್ರಾರಂಬಿಸಲಾಯಿತು. ಸದರಿ ಪ್ರಶಾಂತ ಲಾಡ್ಜ ಮೊದಲನೆ ಪ್ರತಿವಾದಿ ಹಾಗೂ ನನ್ನ 3 ಜನ ಅಣ್ಣಂದಿರು ಮತ್ತು ವಾದಿ ಕೂಡಿಯೇ ಪ್ರಾರಂಬಿಸಿದ್ದೇವೆ ಎಂದರೆ ಸಾಕ್ಷಿ ನಾನೆ ಅದನ್ನು ವೈಯಕ್ತಿಕವಾಗಿ ಪ್ರಾರಂಬಿಸಿದ್ದೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ನನಗೆ 17 ವರ್ಷ ವಯಸ್ಸಿತ್ತು ಎಂದರೆ ಸಾಕ್ಷಿ 18-19 ಎಂದು ನುಡಿದಿರುತ್ತಾರೆ. ಮತ್ತು ಕಾಲೇಜಿಗೆ ಹೋಗುತ್ತಿದ್ದೆ ಎಂದು ನುಡಿದಿರುತ್ತಾರೆ.

ನಾನು ಪ್ರಶಾಂತ ಲಾಡ್ಜ ಪ್ರಾರಂಬಿಸುವ ಕಾಲಕ್ಕೆ ಶಿಕ್ಷಣದ ಜೊತೆಗೆ ಅರೆಕಾಲಿ ನೌಕರಿ ಮಾಡುತ್ತಿದ್ದೆ. ನನಗೆ ಸರಿದ ನೌಕರಿ ಯಿಂದ ಸುಮಾರು 7-8 ಸಾವಿರ ರೂ. ತಿಂಗಳು ಪಗಾರು ಬರುತಿತ್ತು. ನಾನು ಹುಟ್ಟುವ ಮೊದಲು ಮೊದಲನೆ ಪ್ರತಿವಾದಿ ಹಳ್ಳಿ ಹಳ್ಳಿಗಳಿಗೆ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಾಪರವನ್ನೆ ವಾದಿ, ಮೃತ 2 ನೇ ಪ್ರತಿವಾದಿ ಹಾಗೂ 10 ನೇ ಪ್ರತಿವಾದಿ ಮುಂದುವರೆಸಿಕೊಂಡು ಹೋದರು ಎಂದರೆ ಸಾಕ್ಷಿ ಅವರವರ ಉದ್ಯೋಗವನ್ನು ಅವರವರು ಮಾಡಿಕೊಂಡು ಹೋಗುತ್ತಿದ್ದಾರೆಂದು ನುಡಿದಿರುತ್ತಾರೆ. ನಾನು ಮತ್ತು ನನ್ನ ಇನ್ನುಳಿದ ಸಹೋದರರು ಸೇರಿ 1962 ರಲ್ಲಿ ಮೊದಲ ಬಾರಿಗೆ ದಿಲ್ಲಿ ರೆಡಿಮೆಡ ಸ್ಟೋರ್ಸ ಫ್ರಾರಂಬಿಸಿದ್ದೇವೆ ಎಂದರೆ ಸಾಕ್ಷಿ ಮೃತ 2 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಫ್ರಾರಂಬಿಸಿದ್ದರು ಎಂದು ನುಡಿದಿರುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ವಾದಿ ಮುಂಬೈಯಿಂದ ಮಾಲನ್ನು ತಂದು ಹಾಕುತ್ತಿದ್ದ ಎಂದರೆ ಸರಿಯಲ್ಲ. 1965 ರಲ್ಲಿ ನಾವೆಲ್ಲಾ ಅಣ್ಣ ತಮ್ಮಂದಿರು ಮತ್ತು ಮೊದಲನೆ ಪ್ರತಿವಾದಿ ಕೂಡಿ ಕಮತಗೌಡ ಕಟ್ಟಡ ಮತ್ತು ಮುಂದಿನ ಜಾಗೆಯನ್ನು ಒಟ್ಟಿಗೆ ಖರೀದಿಸಿದ್ದೇವೆ ಎಂದರೆ ಸರಿಯಲ್ಲ.

1982 ರಲ್ಲಿ ನನ್ನದು ವಾದಿ ಹಾಗೂ 10 ನೇ ಪ್ರತಿವಾದಿಯದ್ದು ಒಟ್ಟಿಗೆ ಮದುವೆಯಾಗಿದೆ ಎಂದರೆ ಸರಿ . ಸದರಿ ಮದುವೆಯನ್ನು ಮೊದಲನೆ ಪ್ರತಿವಾದಿ ಮತ್ತು ನಾವೆಲ್ಲರೂ ದುಡಿದ ಹಣದಿಂದ ಮಾಡಲಾಗಿದೆ ಎಂದರೆ ಸರಿಯಲ್ಲ. ನಮ್ಮ ವ್ಯವಹಾರ ಬೆಳೆದಂತೆಲ್ಲಾ ಮೊದಲನೆ ಪ್ರತಿವಾದಿ ನಮ್ಮ ಎಲ್ಲಾ ಅಣ್ಣ ತಮ್ಮಂದಿರಿಗೂ ಒಂದೊಂದು ವ್ಯವಹಾರವನ್ನು ವಾಟ್ನಿ ಮಾಡದೇ ಮುಂದುವರೆಸಿಕೊಂಡು ಹೋಗುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ಎಲ್ಲಾ ಕುಟುಂಬದ ಸದಸ್ಯರು ಹೆಚ್ಚಿಗೆ ಆಗಿದ್ದು ಆಸ್ತಿಗಳು ಹೆಚ್ಚಾಗಿದ್ದರಿಂದ ಅನುಕೂಲತೆಗಾಗಿ ನಾವು ಬೇರೆ ಬೇರೆ ಮನೆಯಲ್ಲಿ ವಾಟ್ನಿ ಮಾಡಿಕೊಳ್ಳದೇ ಇದ್ದೇವೆ ಎಂದರೆ ಸಾಕ್ಷಿ ನಮ್ಮ ನಮ್ಮ ವ್ಯವಹಾರಗಳನ್ನು ಬೇರೆ ಬೇರೆಯಾಗಿ ಮಾಡಿಕೊಂಡು ಮೊದಲಿನಿಂದಲೂ ಬೇರೆಯಾಗಿದ್ದೇವೆ ಎಂದು ನುಡಿದಿರುತ್ತಾರೆ. ನಮ್ಮಲ್ಲಿ ವಾಟ್ನಿಯಾಗಿದೆ ಎಂದು ತೋರಿಸಲು ಯಾವುದೆ ದಾಖಲಾತಿ ಇಲ್ಲ. ನಾನೆ ಮೊದಲನೆ ಪ್ರತಿವಾದಿಗೆ ಕಿರಿಯ ಮಗ ಎಂದರೆ ಸಾಕ್ಷಿ ನನಗಿಂತ ಇನ್ನೂ 3 ಜನ ಚಿಕ್ಕವರು ಇದ್ದಾರೆ ಎಂದು ನುಡಿದಿರುತ್ತಾರೆ.

ಒ ಎಸ್ ನಂ. 290/2012
ಡಿ.ಡಬ್ಲ್ಯೂ 5 ಹಾಜರು

ಪ್ರಶಾಂತ ಲಾಡ್ಜ ಇರುವ ಜಾಗೆಯಲ್ಲಿ ನಾನು ಮತ್ತು ಮೊದಲನೆ ಪ್ರತಿವಾದಿ ಲಾಡ್ಜ ಕಟ್ಟಿ ಇದ್ದೇವೆ ಎಂದರೆ ಸಾಕ್ಷಿ ನಾವು ಆಗ ಬೇರೆ ಬೇರೆ ಮನೆಯಲ್ಲಿ ಇದ್ದೇವೆ ಎಂದು ನುಡಿದಿರುತ್ತಾರೆ. ನನ್ನ ಮೇಲೆ ನನ್ನ ಇನ್ನುಳಿದ ಸಹೋದರರು ಪ್ರೀತಿ ವಿಶ್ವಾಸ ಹೊಂದಿದ್ದರಿಂದ ಮತ್ತು ನಾನು ಮೊದಲನೆ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿರುವುದರಿಂದ ನನ್ನ ಇನ್ನುಳಿದ ಸಹೋದರರು ಪ್ರಶಾಂತ ಲಾಡ್ಜ ಮತ್ತು ಅದರಲ್ಲಿರುವ ಆಸ್ತಿಯನ್ನು ನನಗೆ ನೋಡಿಕೊಂಡು ಹೋಗುವಂತೆ ನೀಡಿದ್ದರು ಎಂದರೆ ಸರಿಯಲ್ಲ.

ನನ್ನ ಸಹೋದರರು ನನ್ನ ಮೇಲೆ ಪ್ರೀತಿ ವಿಶ್ವಾಸ ಇದ್ದುದ್ದರಿಂದ ಹಾಗೂ ಮೊದಲನೆ ಪ್ರತಿವಾದಿ ನನ್ನ ಜೊತೆ ಇದ್ದುದ್ದರಿಂದ ಅವರು ನಾನು ಮಾಡುತ್ತಿದ್ದ ವ್ಯವಹಾರಗಳ ಬಗ್ಗೆ ವಿಚಾರಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಅದರ ದುರುಪಯೋಗ ಪಡೆದುಕೊಂಡು ನಾನು ವಾದಿ ಮತ್ತು ಇನ್ನುಳಿದ ಪ್ರತಿವಾದಿಗಳಿಗೆ ಗೊತ್ತಾಗದೇ ಹಾಗೆ ಮೊದಲನೆ ಪ್ರತಿವಾದಿಯ ಹೆಸರಿನಲ್ಲಿರುವ ಆಸ್ತಿಗಳನ್ನು ದಾನ ಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸಾಕ್ಷಿ ಅದು ಎಲ್ಲರಿಗೂ ಗೊತ್ತು ಎಂದು ನುಡಿದಿರುತ್ತಾರೆ. ನಾನು ಈ ದಾವೆಗೆ ಹಾಜರು ಮಾಡಿದ ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಮೋಸದಿಂದ ನನ್ನ ಹೆಸರಿನಲ್ಲಿ ಆಸ್ತಿಗಳನ್ನು ಮಾಡಿಕೊಂಡಿದ್ದರಿಂದ ಮತ್ತು ಅವುಗಳಲ್ಲಿ ವಾದಿ ಹಾಗೂ ಇನ್ನುಳಿದ ಪ್ರತಿವಾದಿಗಳಿಗೆ ಪಾಲನ್ನು ತಪ್ಪಿಸುವ ಉದ್ದೇಶದಿಂದ ವಾಟ್ನಿಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹುಟ್ಟಿದಾಗಿನಿಂದ ಇಲ್ಲಿಯವರೆಗೆ ನಾವೆಲ್ಲರೂ ಕೂಡಿಯೇ ಇದ್ದು ಬೇರೆ ಬೇರೆ ವ್ಯವಹಾರಗಳನ್ನು ಅನುಕೂಲಕ್ಕಾಗಿ ಮಾಡಿಕೊಂಡಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಪಾಲನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

15 ರಿಂದ 17 ರವರ ಪರ ವಕೀಲರ ಕೋರಿಕೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಸತೀಶ ಜೆ.ಬಾಳಿ)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ